**<u>ಸಾಕ್ಷಿಯನ್ನು ದಿನಾಂಕ *29.09.2025* ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನಾನು ದ್ವಿತೀಯ ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಪೈಕಿ 4 ಜನ ಗೊತ್ತಿರುತ್ತಾರೆ. ಅವರುಗಳೆಂದರೆ ಆರೋಪಿ 1 ರಿಂದ 4. ಉಳಿದ ಆರೋಪಿತರನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿ. ಪೊಲೀಸರು ಸ್ಥಳ ಕ್ಕೆ ಬೆಳಗ್ಗೆ 11 ಗಂಟೆಗೆ ಬಂದಿದ್ದರು. ಪೊಲೀಸರು ಸ್ಥಳ ಕ್ಕೆ ಬಂದಾಗ ಮೃತ ಬಸವರಾಜನನ್ನು ಕೆಳಕ್ಕೆ ಇಳಿಸಿರಲಿಲ್ಲ. ಮೃತ ದೇಹವನ್ನು ಇಳಿಸಿದವರ ಹೆಸರು ಹೇಳಲು ಆಗುವುದಿಲ್ಲ. ಆ ದಿನ ಮೃತ ದೇಹವನ್ನು ಕೆಳಕ್ಕೆ ಇಳಿಸಿದವರು ನನಗೆ ಪರಿಚಯಸ್ಥರು ಇದ್ದರು ಅವರು ನಮ್ಮ ಊರಿನವರು ಇದ್ದರು. ಮೃತ ವ್ಯಕ್ತಿಯ ಪ್ಯಾಂಟ್ ಮತ್ತ ಶರ್ಟ್‌ನ ಜೇಬಿನಿಂದ ಎಷ್ಟು ಪತ್ರಗಳು ಸಿಕ್ಕಿದ್ದವು ಎಂದು ನನಗೆ ಗೊತ್ತಿಲ್ಲ ಏಕೆಂದರೆ ನಾನು ದೂರದಲ್ಲಿ ನಿಂತಿದ್ದೆ. ನಾನು ಪೊಲೀಸರಿಗೆ ಮೃತ ದೇಹವನ್ನು ಇಳಿಸಿದ್ದರು ಎಂದು ಹೇಳುವ ಸ್ಥಳ ದಲ್ಲಿ ದಿನಾಂಕ 14.11.2020 ರಂದು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ. ಪೊಲೀಸರು ನನಗೆ ಠಾಣೆಗೆ ಬರುವಂತೆ ಲಿಖಿತವಾಗಿ ನೊಟೀಸ್ ಕೊಟ್ಟಿರಲಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಮಧ್ಯಾಹ್ನ 2.00 ಗಂಟೆ ಮೇಲ್ಪಟ್ಟು ಆಗಿತ್ತು. ನಾು ಠಾಣೆಗೆ ಹೋದಾಗ ಠಾಣೆಯಲ್ಲಿ ಇನ್ಸ್ ಪೆಕ್ಟರ್ ಇದ್ದರು ಅಲ್ಲದೇ ಸಿಬ್ಬಂದಿಗಳು ಇದ್ದರು. ನನ್ನ ಜೊತೆಯಲ್ಲಿ ನಾಗಮ್ಮ ಮತ್ತು ಆನಂದ

ಇದ್ದರು. ನಾಗಮ್ಮ ರವರು ಪತ್ರವನ್ನು ಹಾಜರುಪಡಿಸಿದ್ದು ಆ ಪತ್ರ ಮೃತನು ಬರೆದಂತಹ ಪತ್ರ ಎಂದು ಹೇಳಿದ್ದರು. ನಾಗಮ್ಮ ಠಾಣೆಗೆ ತಂದು ಪತ್ರವನ್ನು ಹಾಜರುಪಡಿಸಿದಾಗ ನನಗೆ ಮೃತ ಬಸವರಾಜು ಬರೆದಂತಹ ಪತ್ರ ಎಂದು ಗೊತ್ತಾಗಿತ್ತು ಅದಕ್ಕಿಂತ ಪೂರ್ವದಲ್ಲಿ ಗೊತ್ತಿರಲಿಲ್ಲ. ನಾನು ಠಾಣೆಯಲ್ಲಿ ಮಧ್ಯಾಹ್ನ 2.00 ಗಂಟೆಯಿಂದ 3.00 ಗಂಟೆಯವರೆಗೆ ಇದ್ದೆ. ಆ ದಿನ ಪೊಲೀಸರು ನನ್ನ ಹೇಳಿಕೆ ಯನ್ನು ತೆಗೆದುಕೊಂಡಿದ್ದರು. ನಾಗಮ್ಮ ಪೊಲೀಸ್ ಠಾಣೆಗೆ ತಂದು ಕೊಟ್ಟಿದ್ದರು ಎಂದು ಹೇಳುವ ದಾಖಲೆಯಲ್ಲಿ ಏನೇನು ಬರೆದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ಪೊಲೀಸರು ಸಹ ನನಗೆ ಓದಿ ಹೇಳಿರಲಿಲ್ಲ. ನಾನು ಈಗ ನೋಡುತ್ತಿರುವ ನಿಪಿ–6 ರಲ್ಲಿ ಮೃತ ಬಸವರಾಜನ ಸಹಿ ಇರುವುದಿಲ್ಲ. ನಾನು ಈಗ ಓದಿ ಹೇಳಿದ ನಿಡಿ–1 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ಸಿದ್ದರಾಜು ಮತ್ತು ಅವರ ಮನೆಯವರು ಬಸವರಾಜು ಗೆ ತೊಂದರೆ ಕೊಡುತ್ತಿದ್ದರು ಅದೇ ಕಾರಣಕ್ಕಾಗಿ ಮೃತ ಬಸವರಾಜು ಮತ್ತು ಅವರ ಹೆಂಡತಿ ಕಲ್ಲಳ್ಳಿಗೆ ಹೋಗಿ ವಾಸ ಮಾಡುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಬಸವರಾಜು ಮತ್ತು ಹೆಂಡತಿ ನಾಗಮ್ಮ ಕಲ್ಲಳ್ಳಿಯಿಂದ ಬಿಳಿಗೆರೆ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತಿದ್ದರು ಎಂದು ಸಾಕ್ಷಿದಾರರು ಮುಂದುವರೆದು ಹೇಳಿರುತ್ತಾರೆ. ಡೆತ್ ನೋಟ್ ಅನ್ನು ನೋಡುವ ಪೂರ್ವದಲ್ಲಿ ನನಗೆ ಡೆತ್ ನೋಟ್ ನಲ್ಲಿ ಏನೇನು ಬರೆದಿತ್ತು ಎಂದು ಗೊತ್ತಿರುವುದಿಲ್ಲ. ಠಾಣೆಯಲ್ಲಿ ನೋಡಿದ ಮೇಲೆ ಡೆತ್ ನೋಟ್ ನಲ್ಲಿ ಏನೇನು ಬರೆದಿರುತ್ತದೆ ಎಂದು ನನಗೆ ಗೊತ್ತಾಗಿತ್ತು. ಡೆತ್ ನೋಟ್ ನಲ್ಲಿ ಸಿದ್ದರಾಜು ಮತ್ತು ಮನೆಯವರು ಬಸವರಾಜುಗೆ ಹಿಂಸೆ ಕೊಡುತ್ತಿರುವ ಬಗ್ಗೆ

ಬರೆದಿರುವುದಿಲ್ಲ. ನಾಗಮ್ಮ ಮೃತ ಬಸವರಾಜನ ಕೈಬರವಣಿಗೆಯ ಪತ್ರ ಎಂದು ಹೇಳಿ ಹಾಜರುಪಡಿಸಿದ್ದರು ಅದನ್ನು ನನ್ನ ಸಮಕ್ಷಮ ಪೊಲೀಸರು ಅಮಾನತ್ತು ಪಡಿಸಿಕೊಂಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಸಹಿ ತೆಗೆದುಕೊಂಡಿದ್ದರು. ಪೊಲೀಸರು ಡೆತ್ ನೋಟ್ ಮೇಲೆ ಗುರುತು ಮಾಡಿದ್ದರು. ಡೆತ್ ನೋಟ್ ಮೇಲೆ ನನ್ನ ಸಹಿ ತೆಗೆದುಕೊಂಡಿರಲಿಲ್ಲ. ಅಮಾನತ್ತು ಮಹಜರ್ ನಲ್ಲಿ ಏನೇನು ಬರೆದಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*